**ದಿನಾಂಕಃ 16/10/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ. ವಕೀಲರಿಂದಃ**

1. ಈ ದಾವೆಯನ್ನು ಸ್ವತ್ತಿನ ಸಂಖ್ಯೆ 203 ಕ್ಕೆ ಹೂಡಿದ್ದಾರೆ. ಕುಳ್ಳಯ್ಯ ರವರಿಗೆ 4 ಜನ ಮಕ್ಕಳು. ದಾವಾ ಸ್ವತ್ತು ನನ್ನ ದೊಡ್ಡಪ್ಪ ಚಂದ್ರ ಶೇಖರಯ್ಯ ಬಿನ್ ಕುಳ್ಳಯ್ಯ ರವರಿಗೆ ಅನುಭವದಂತೆ ಎ ಸಿ ರವರ ಆದೇಶದಂತೆ ಅವರ ಹೆಸರಿಗೆ ಬಂದಿತ್ತು. ನನ್ನ ತಾತನಿಗೆ ಚಂದ್ರಶೇಖರಯ್ಯ, ಸಣ್ಣ ನಂಜಯ್ಯ, ಸಣ್ಣ ಪುಟ್ಟಯ್ಯ ಮತ್ತು ತಮ್ಮಣ್ಣ ಎಂಬ 4 ಜನ ಮಕ್ಕಳು. ನಾನು ಸಣ್ಣ ಪುಟ್ಟಯ್ಯ ರವರ ಮಗ. ಕಳೆದ 20-25 ವರುಷಗಳ ಹಿಂದೆ ಕುಳ್ಳಯ್ಯ ರವರ ಮಕ್ಕಳ ನಡುವೆ ಬಾಯಿ ಮಾತಿನಲ್ಲಿ ಹಿಸ್ಸೆ ಆಗಿದೆ ಎಂದರೆ ಸರಿ. ನನ್ನ ತಂದೆಗೆ ಬಾಯಿ ಮಾತಿನಲ್ಲಿ ಹಿಸ್ಸೆ ಮುಖಾಂತರ ದಾವಾ ಸ್ವತ್ತು ಬಂದ ಬಗ್ಗೆ ದಾಖಲೆ ಇದೆ. ನನ್ನ ತಂದೆ ಹೆಸರಿನಲ್ಲಾಗಲೀ ಹಾಗೂ ನನ್ನ ಹೆಸರಿನಲ್ಲಾಗಲೀ ಡಿಮಾಂಡ್ ರಿಜಿಸ್ಟರ್ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಪಂಚಾಯಿತಿಯಲ್ಲಿ ಪಾಲು ಪಾರಿಕತ್ ಮಾಡಿಕೊಂಡಿಲ್ಲ.

2. ಲಿಖಿತ ಹೇಳಿಕೆಯನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ಚಂದ್ರಶೇಖರಯ್ಯ ಮತ್ತು ಅವರ ಸಹೋದರರು ಬಾಯಿ ಮಾತಿನಲ್ಲಿ ಹಿಸ್ಸೆ ಮಾಡಿಕೊಂಡಿದ್ದಾರೆಂದು ತಿಳಿಸಿದ್ದೇನೆ. ಅದರಂತೆ ಡಿಮಾಂಡ್ ರಿಜಿಸ್ಟರ್ ನಲ್ಲಿ ನನ್ನ ತಂದೆಯ ಹೆಸರು ಬಂದಿದೆ ಎಂದು ತಿಳಿಸಿಲ್ಲ, ಆದರೆ ನನ್ನ ದೊಡ್ಡಪ್ಪ ಚಂದ್ರಶೇಖರಯ್ಯ ರವರ ಹೆಸರು ಬಂದಿದೆ ಎಂದು ತಿಳಿಸಿದ್ದೇನೆ. ಹಿಸ್ಸೆ ಬಗ್ಗೆ ಪಾಲು ಪಟ್ಟಿ ಬಂದಿಲ್ಲ. ವಾದಿಯ ಹೆಸರು ಚಂದ್ರಶೇಖರ ಎಂದರೆ ಸರಿ, ಆದರೆ ಚಂದ್ರಶೇಖರಯ್ಯ ಅಲ್ಲ. ವಾದಿಯ ತಂದೆಯ ಹೆಸರು ಸಣ್ಣ ಹೈದ ಎಂದು ಗೊತ್ತು, ಆದರೆ ಸಣ್ಣಯ್ಯ ಎಂದರೆ ಗೊತ್ತಿಲ್ಲ.

3. ನಾನು ಹಾಜರುಪಡಿಸಿದ ದಾಖಲೆಗಳ ಪ್ರಕಾರ ಸ್ವತ್ತಿನ ಸಂಖ್ಯೆ 213 ಜಂಜರ್ ನಂ. 98. ಅದು ಮನೆಯಾಗಿದ್ದು, ಅದರಲ್ಲಿ ನನ್ನ ದೊಡ್ಡಪ್ಪ ರವರ ಮಗ ಶಣ್ಮುಖ ರವರು ವಾಸಿಸುತ್ತಿದ್ದಾರೆ. ಈ ವ್ಯಾಜ್ಯ ಮನೆಗೋಸ್ಕರ ನಡೆಯುತ್ತಿದೆ. ಖಾಲಿ ನಿವೇಶನಕ್ಕಲ್ಲ. ನಾನು

ಮನೆಯ ಬಗ್ಗೆ ತಕರಾರು ಮಾಡಿದ್ದೇನೆ. ಜಂಜರ್ 184 ಸ್ವತ್ತಿನ ನಂ. 213 ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಶಣ್ಮುಖ ಬಿನ್ ಚಂದ್ರಶೇಖರಯ್ಯ ರವರ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಜಗಧೀಶ ರವರ ಮನೆ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಕ್ಷಿಣಕ್ಕೆ ರಸ್ತೆ ಇದೆ. ಉತ್ತರಕ್ಕೆ ಬೋರಯ್ಯ ರವರ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಚಿಕ್ಕಪ್ಪ ತಮ್ಮಣ್ಣರವರ ಮನೆ ಇದೆ ಎಂದು ನುಡಿಯುತ್ತಾರೆ. ಪೂರ್ವಕ್ಕೆ ನನ್ನ ತಂದೆ ಸಣ್ಣ ಪುಟ್ಟಯ್ಯ ರವರ ಮನೆ ಮತ್ತು ನಿವೇಶನ ಇದೆ. ನನ್ನ ತಕರಾರಿನಲ್ಲಿ ಸ್ವತ್ತಿನ ಸಂಖ್ಯೆ 213 ಕ್ಕೆ ಚಕ್ಕು ಬಂದಿ ಹೇಳಿ ಬರೆಸಿದ್ದೇನೆ. ಸ್ವತ್ತಿನ ಸಂ. 214 ನನ್ನ ಚಿಕ್ಕಪ್ಪ ತಮ್ಮಣ್ಣ ರವರಿಗೆ ಮತ್ತು ಸ್ವತ್ತಿನ ಸಂ. 215 ನನ್ನ ತಂದೆ ಸಣ್ಣ ಪುಟ್ಟಯ್ಯ ರವರಿಗೆ ಸೇರಿದ್ದು. ಸದರಿ ವಿಚಾರವನ್ನು ತಕರಾರಿನಲ್ಲಿ ತಿಳಿಸಿದ್ದೇನೆ. ಡಿಮಾಂಡ್ ರಿಜಿಸ್ಟರ್ ನ ಜಂಜರ್ ನಂ. 184, ಸ್ವತ್ತಿನ ನಂ. 213 ನನ್ನ ದೊಡ್ಡಪ್ಪ ಚಂದ್ರಶೇಖರಯ್ಯ ರವರಿಗೆ ಸೇರಿದ್ದು. ನನ್ನ ದೊಡ್ಡಪ್ಪನಿಂದ ನನ್ನ ತಂದೆ ಹೆಸರಿಗಾಗಲೀ ಅಥವಾ ನನ್ನ ಹೆಸರಿಗಾಗಲೀ ಬಂದ ಬಗ್ಗೆ ದಾಖಲೆ ಮಾಡಿಕೊಂಡಿಲ್ಲ.

4. ಜಂಜರ್ ನಂ. 184, ಸ್ವತ್ತಿನ ನಂ. 213 ಖಾಲಿ ನಿವೇಶನ ಎಂದರೆ ಸರಿಯಲ್ಲ. ಅದರಲ್ಲಿ ಮನೆ ಇದೆ. ಮನೆ ನಂಬರು ಗೊತ್ತಿಲ್ಲ. ಸದರಿ ಮನೆಗೆ ಕಂದಾಯ ಕಟ್ಟಿದ್ದೇವೆ. ನನ್ನ ದೊಡ್ಡಪ್ಪನ ಮಕ್ಕಳು ಕಂದಾಯ ಪಾವತಿ ಮಾಡಿದ ರಸೀದಿಗಳನ್ನು ಹಾಜರುಪಡಿಸಬೇಕು. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನ ಇರುವ ಬಗ್ಗೆ ಅಸ್ಸೆಸ್ಮೆಂಟ್ ರಿಜಿಸ್ಟರ್, ಚಕ್ಕುಬಂದಿ ಪ್ರಮಾಣ ಪತ್ರ, ಆರ್.ಟಿ.ಸಿ. ಯನ್ನು ಹಾಜರುಪಡಿಸಿದ್ದೇನೆ. ಒಂದು ವರುಷದ ಹಿಂದೆ ಮಹಜರು ಮಾಡಿ ಚಕ್ಕುಬಂದಿ ಪ್ರಮಾಣ ಪತ್ರ ನೀಡಿದ್ದರು. ನಾನು ಚಕ್ಕುಬಂದಿ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಮಹಜರು ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ಗ್ರಾಮ ಪಂಚಾಯಿತಿಯಲ್ಲಿದೆ. ದಾವಾ ಸ್ವತ್ತು ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದರೆ ಗ್ರಾಮ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದು ನುಡಿಯುತ್ತಾರೆ.

5.ಜಂಜರ್ ನಂ. 211 ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಕುಳ್ಳಯ್ಯ ರವರು ಮರ್ಚಿ ಬೋರಯ್ಯ ರವರ ಮಗ. ಕುಳ್ಳಯ್ಯರವರಿಗೆ ಜಂಜರ್ ನಂ. 211 ರ ಸ್ವತ್ತು ಇಲ್ಲ.

1983–84 ರಲ್ಲಿ ಸ್ವತ್ತಿನ ನಂ. 213 ನ್ನು ಚಂದ್ರಶೇಖರಯ್ಯ ರವರ ಅನುಭವದಂತೆ ಎ ಸಿ ನ್ಯಾಯಾಲಯದಲ್ಲಿ ಖಾತೆಗೆ ಆದೇಶ ಮಾಡಿದರು. ಎ ಸಿ ನ್ಯಾಯಾಲಯದ ಆದೇಶದ ಪ್ರತಿಯನ್ನು ಹಾಜರುಪಡಿಸಿಲ್ಲ. ಆದರೆ ಅಸ್ಸೆಮೆಂಟ್ ರಿಜಿಸ್ಟರ್ ನಲ್ಲಿ ನಮೂದು ಇದೆ. ನಿಡಿ–2 ರಲ್ಲಿ ಸ್ವತ್ತಿನ ನಂ. 165, ಜಂಜರ್ ನಂ. 186 ಗ್ರಾಮ ಠಾಣಕ್ಕೆ ಸೇರಿದೆ ಎಂದು ಮಾತ್ರ ನಮೂದಾಗಿದೆ ಎಂದರೆ ಸರಿ. ಆದರೆ ಚಂದ್ರಶೇಖರಯ್ಯ ಎಂಬುವವರಿಗೆ ಸೇರಿದ್ದು ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ–2 ರಲ್ಲಿ ಜಂಜರ್ ನಂ. 210 ಆಸ್ತಿ ನಂ. 225 ಯಾರಿಗೆ ಸೇರಿದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ–2 ರಲ್ಲಿ ಜಂಜರ್ ನಂ. 210 ಆಸ್ತಿ ನಂ. 225 ವಾದಿ ಚಂದ್ರಶೇಖರ ರವರಿಗೆ ಸೇರಬೇಕು ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ–2 ಪಂಚಾಯಿತಿಯ ಮೂಲ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿಯಲ್ಲಿ ಪ್ರತಿ 5 ವರುಷಕ್ಕೊಮ್ಮೆ ಜಂಜರ್ ನಂ. ಮತ್ತು ಆಸ್ತಿ ನಂ. ಕಂದಾಯ ಪಡೆಯಲು ಬದಲಾವಣೆ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. 2011–12 ರಲ್ಲಿ ಜಂಜರ್ ನಂ.184/213 ಎಂದು ಬರೆದಿದೆ ಎಂದರೆ ಸಾಕ್ಷಿಯು ವಾದಿ ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ಚಂದ್ರಶೇಖರಯ್ಯ ರವರ ತಂದೆಯ ಹೆಸರು ಸಣ್ಣ ಹೈದನಲ್ಲ. ನಿಡಿ–4 ರಲ್ಲಿ ತಂದೆಯ ಹೆಸರು ಸಣ್ಣ ಹೈದ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸ್ವತ್ತಿನ ನಂ. 215 ನನ್ನ ತಂದೆಗೆ ಸೇರಿದ್ದು, ಆದರೆ ಜಂಜರ್ ನಂಬರು ಗೊತ್ತಿಲ್ಲ.

7. ಆಸ್ತಿ ನಂ. 213 ಮತ್ತು 215 ರಲ್ಲಿ ಒಂದು ದೊಡ್ಡ ಮನೆ ಇದೆ, ಅದನ್ನು ನಾವು ಮತ್ತು ನಮ್ಮ ದೊಡ್ಡಪ್ಪ ಒಟ್ಟು 4 ಭಾಗ ಮಾಡಿಕೊಂಡಿದ್ದೇವೆ. ಚಂದ್ರಶೆಖರಯ್ಯ ರವರಿಗೆ ಆಸ್ತಿ ನಂ. 213, ತಮ್ಮಣ್ಣ ರವರಿಗೆ 214, ನನ್ನ ತಂದೆ ಸಣ್ಣ ಪುಟ್ಟಯ್ಯರವರಿಗೆ 215, ದೇವಮ್ಮ ರವರಿಗೆ 216 ಎಂದು ಆಸ್ತಿ ಸಂಖ್ಯೆ ನೀಡಿದ್ದಾರೆ. ನನ್ನ ಹೇಳಿಕೆಯಲ್ಲಿ ಒಂದೇ ಮನೆಯಲ್ಲಿ 4 ಭಾಗ ಮಾಡಡಿಕೊಂಡು 4 ಸ್ವತ್ತಿನ ಸಂಖ್ಯೆ ನೀಡಿದ್ದಾರೆಂದು ತಿಳಿಸಿದ್ದೇನೆ. ಆದರೆ 4 ಭಾಗ ಆಗಿದೆ ಎಂದು ತಿಳಿಸಿದ್ದೇನೆ. ನನ್ನ ಹೇಳಿಕೆಯಲ್ಲಿ ಹಿಸ್ಸೆ ಬಗ್ಗೆ ಯಾಗಲೀ,

ಸ್ವತ್ತಿರ್ನ ಸಂಖ್ಯೆ ಬಗ್ಗೆಯಾಗಲೀ ತಿಳಿಸಿಲ್ಲ ಎಂದರೆ ಸಾಕ್ಷಿಯು ಸ್ವತ್ತಿನ ಬಗ್ಗೆ ತಿಳಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಿ ಸ್ವತ್ತಿನ ಸಂಖ್ಯೆ 215 ಸರಕಾರದಿಂದ ಮಂಜೂರಾಗಿದೆ ಎಂದ ತಿಳಿಸಿದ್ದೇನೆ. ಅದಕ್ಕೆ ಸರಕಾರ ಹಣ ನೀಡಿದ್ದರಿಂದ ಮನೆ ಕಟ್ಟಿದ್ದೇನೆಂದು ತಿಳಿಸಿದ್ದೇನೆ. ದೇವರಾಜು ಅರಸು ನಿಗಮ ಮಂಡಳಿಯಿಂದ ಮಂಜೂರಾತಿ ಪತ್ರವನ್ನು ಸಿದ್ದಲಿಂಗಮ್ಮ ಮತ್ತು ಪುಷ್ಪ ರವರ ಹೆಸರಿನಲ್ಲಿ ನೀಡಿದ್ದರು. ಸದರಿ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದೇನೆ. ಅವರ ಹೆಸರು ಪಂಚಾಯಿತಿಯಲ್ಲಿ ನಮೂದಾಗಿದೆಯೇ ಎಂದರೆ ಪ್ರಕರಣ ದಾಖಲಾದ್ದರಿಂದ ಅವರ ಹೆಸರಿನಲ್ಲಿ ಬಂದಿಲ್ಲ ಎಂದು ನುಡಿಯುತ್ತಾರೆ. ಮಂಜೂರಾತಿ ಜಾಗದಲ್ಲಿ ಸಣ್ಣ ಪುಟ್ಟಯ್ಯ ರವರ ಮಕ್ಕಳು ಮನೆ ಕಟ್ಟಿದ್ದೇವೆ. ಮನೆ ಕಟ್ಟಲು ಲೈಸೆನ್ಸ್ ಪಡೆದಿಲ್ಲ, ಕಾರಣ ಅಷ್ಟರಲ್ಲಿ ಈ ಕೇಸು ದಾಖಲಾಗಿತ್ತು. ಮನೆ ಕಟ್ಟಿ ಪೂರ್ಣಗೊಂಡಿದೆ. ನನ್ನ ಹೇಳಿಕೆಯಲ್ಲಿ ಈ ಕೇಸು ದಾಖಲಾದ್ದರಿಂದ ಮನೆ ಪೂರ್ಣ ಗೊಂಡಿಲ್ಲ ಎಂದು ತಿಳಿಸಿಲ್ಲ. ಪೂಃ ವಾದಿಯ ನಿವೇಶನ, ಪಃ ಕುಳ್ಳಯ್ಯ ರವರ ಮನೆ, ಉಃ ಬೋರಯ್ಯ ರವರ ಮನೆ, ದಃ ರಸ್ತೆ, ಈ ಚಕ್ಕುಬಂದಿಯಲ್ಲಿರುವ ನಿವೇಶನ ನಮಗೆ ಸೇರಿದ್ದು, ಅದರ ಸ್ವತ್ತಿನ ಸಂಖ್ಯೆ 226. ಅದರ ಜಂಜರ್ ನಂಬರು ಗೊತ್ತಿಲ್ಲ. ಈಗ ಹೇಳಿದ ಚಕ್ಕುಬಂದಿಯಲ್ಲಿ ನಮ್ಮ ನಿವೇಶನದ ಸಂ. 226 ಇದೆ ಎಂದು ಹೇಳಿಕೆಯಲ್ಲಿ ಬರೆಸಿದ್ದೇನೆ. ಸದರಿ ಚಕ್ಕುಬಂದಿಯಲ್ಲಿ ನಮ್ಮ ನಿವೇಶನ ಇದೆ ಎಂದು ತೋರಿಸಲು ಚಕ್ಕುಬಂದಿಯ ದಾಖಲೆ ಹಾಜರುಪಡಿಸಿಲ್ಲ, ಆದರೆ ಡಿಮಾಂಡ್ ರಿಜಿಸ್ಟರ್, ಅಸೆಸ್ಮೆಂಟ್ ರಿಜಿಸ್ಟರ್ ಹಾಜರುಪಡಿಸಿದ್ದೇನೆ.

8. ದಾವಾ ಸ್ವತ್ತಿಗೆ ಇ–ಸ್ವತ್ತು ಮಾಡಿಸಲು ವಾದಿ ಅರ್ಜಿ ನೀಡಿ ಪಂಚಾಯಿತಿಯವರು ಸ್ಥಳಕ್ಕೆ ಬಂದಾಗ ನಾವು ತಂಟೆ ತಕರಾರು ಮಾಡಿದೆವು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈಗಲೂ ವಾದಿ ದನಗಳನ್ನು ಕಟ್ಟಿಕೊಂಡು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಮೊದಲು ದಾವಾ ಸ್ವತ್ತಿನಲ್ಲಿ ಹುಲ್ಲು ಮನೆ ಇತ್ತು ಎಂದರೆ ಸರಿಯಲ್ಲ. ಹಳೆ ಮನೆಯನ್ನು ಹೊಡೆದು ಹೊಸ ಮನೆ ಕಟ್ಟಿಲ್ಲ, ಆದರೆ ಅದನ್ನೇ ಸರಿ ಮಾಡಿಸಿಕೊಂಡಿದ್ದೇವೆ. ದಾವಾ ಸ್ವತ್ತಿನಲ್ಲಿ ಯಾವುದೇ ಮನೆಯನ್ನು ಕಟ್ಟಿಕೊಂಡಿಲ್ಲ, ದಾವಾ ನಿವೇಶನವನ್ನು

ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯವರು ದಾವಾ ಸ್ವತ್ತಗೆ ತೊಂದರೆ ನೀಡಬೇಡಿ ಎಂದು ನನಗೆ ತಿಳುವಳಿಕೆ ನೀಡಿದರೂ ಸಹ ನಾವು ತೊಂದರೆ ನೀಡಿದ್ದೆವು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನಿಂದ ನಮಗೆ ಬಂದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಆ ರೀತಿ ನಾನು ತಿಳಿಸಿಲ್ಲ ಎಂದು ನುಡಿಯುತ್ತಾ ನನ್ನ ದೊಡ್ಡಪ್ಪನಿಗೆ ಸೇರಿದ್ದು ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನಿಗೆ ಸೇರಿದ್ದರಿಂದ ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಿತಾಸಕ್ತಿ ಇಲ್ಲ ಎಂದರೆ ಸಾಕ್ಷಿಯು ನನ್ನ ವಿರುದ್ಧ ದಾವೆ ಹೂಡಿದ್ದಾರೆಂದು ನುಡಿಯುತ್ತಾರೆ. ದಾವಾ ಸ್ವತ್ತು ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ದಿಃ 10.01.2017 ರಂದು ನಾವು ಗುಂಪು ಕಟ್ಟಿಕೊಂಡು ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟೆವು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**